ಹಾಕಿಕೊಳ್ಳುತ್ತಿದ್ದೆವು. ಇದೆಲ್ಲಾ ಮುಗಿಯುವ ಹೊತ್ತಿಗೆ ಸಂಜೆ ನಾಲ್ಕುಗಂಟೆ ಆಗುತ್ತಿತ್ತು. ಅನಂತರ ದೇವರಿಗೆ ಎಡೆ ಇಟ್ಟು 'ಮುಲಾವು' ಮಾಡುತ್ತಿದ್ದೆವು. ಒಂದು ಹಿತ್ತಾಳೆ ಚೊಂಬಿನ ಮೂರು ಕಡೆಗೆ ನಾಮ ಬಳಿದು, ಹತ್ತಾರು ಮನೆಗಳಿಗೆ 'ಗೋವಿಂದಾ, ಗೋವಿಂದಾ' ಎಂದು ಹೇಳುತ್ತಾ ಹೋಗುತ್ತಿದ್ದೆವು. ಅವರು ನಾಮ ಬಳಿದ ಚೊಂಬಿಗೆ ಅಕ್ಕಿಯನ್ನೋ, ಇಲ್ಲ ರಾಗಿ ಹಿಟ್ಟನ್ನೋ ಹಾಕಿ, ನಮ್ಮ ಕಾಲಿಗೆ ನಮಸ್ಕರಿಸುತ್ತಿದ್ದರು. ಇದೊಂದು ಸಂಗತಿ ಮಾತ್ರ ನನಗೆ ಅತೀವ ಮುಜುಗರ ತರುತ್ತಿತ್ತು. ಎಷ್ಟೋ ಸಲ ನನ್ನ ಸೋದರತ್ತೆಯರು, ಕೇರಿಯ ಹಿರಿಯರು ಕಾಲಿಗೆ ಶರಣು ಮಾಡುವಾಗಲೆಲ್ಲಾ ಏನೂ ತೋಚದೆ ಕಣ್ಣುಮುಚ್ಚಿಕೊಂಡು ನಿಂತುಬಿಡುತ್ತಿದ್ದೆ! ಮುಖ್ಯವಾಗಿ ಅಂದು ಪೂಜೆ ಮುಗಿಯುವವರೆಗೂ ಮನೆಯ ಹಿರಿಯರು ಮತ್ತು ಕಿರಿಯರು ಎಲ್ಲರೂ ಸೇರಿದಂತೆ ಉಪವಾಸ ಇರಬೇಕಾಗಿತ್ತು. ನಾನಂತೂ ಉಪವಾಸ ಇದ್ದು, 'ಮುಲಾವು' ಮಾಡುವುದನ್ನೇ 'ದೇವರ ಮೇಲಿನ ಭಕ್ತಿ' ಎಂದು ಭಾವಿಸಿದ್ದೆ! ಈ ಉಪವಾಸದಿಂದಾಗಿ ನನ್ನ ದೇಹವೆಲ್ಲಾ ಸೊರಗಿ ಹೋಗುತ್ತಿತ್ತು! ಎಷ್ಟೊತ್ತಿಗೆ ಪೂಜೆ ಮುಗಿದು, ಉಂಬಕ್ಕೆ ಇಡುತ್ತಾರೋ ಎಂದು ತುದಿಗಾಲಲ್ಲಿ ನಿಂತಿರುತ್ತಿದ್ದೆ. ಕೆಲವು ಸಲ ಬ್ಯಾಸರ್ಹತ್ತಿ 'ಏತಕ್ಕಾದರೂ ವಾರ ಬರುತ್ತದೋ' ಎಂದು 'ಶನಿವಾರ'ಕ್ಕೆ ಹಿಡಿ ಶಾಪವನ್ನೂ ಹಾಕಿದ್ದೇನೆ. ಇದರಾಚೆಗೂ ದೇವರ ಶ್ರದ್ಧಾವಂತ ಭಕ್ತರಾಗಿರುವ ನನ್ನ ಕುಟುಂಬ 'ಶನಿವಾರದ ಬತ'ವನ್ನು ಕೈಬಿಡದೆ, ಇಂದಿಗೂ ಅದನ್ನು ನಿಷ್ಠೆಯಿಂದ ಅನುಸರಿಸುತ್ತಿದೆ.

ಆದರೆ, ಒಂದು ಕಾಲಕ್ಕೆ ನಮ್ಮ ದೇವರಿಗೆಲ್ಲಾ ಹೂ ಕೊಡುತ್ತಿದ್ದ 'ಹೂವಿನ ತೋಟ' ಇಂದು ಭೂಮಿಯ ಮೇಲೆಯೇ ಇಲ್ಲ! ತೋಟವಿದ್ದ ಜಮೀನೆಲ್ಲಾ ಹಣವಂತರ ಪಾಲಾಗಿದೆ. ತೋಟವನ್ನು ಹಗಲಿರುಳೂ ಪೊರೆಯುತ್ತಿದ್ದ ಏತದ ಬಾವಿ ಭೂಮಿಯಲ್ಲಿ ಮುಚ್ಚಿಹೋಗಿದೆ. ಏತ ಕಟ್ಟಿದ್ದ ಅಮ್ಟೆ ಮರವೂ ಈಗಿಲ್ಲ. ಈ ಅಮ್ಟೆ ಮರಕ್ಕೂ ನನಗೂ ಬಹುದೀರ್ಘಕಾಲಿನ ಗೆಳೆತನವಿದೆ. ನಮ್ಮ ಶಾಲಾ ಪುಸ್ತಕಗಳಿಗೆ 'ಮರಾಳೆ' ಹಾಕಿದ ನಂತರ ಇದೇ ಅಮ್ಟೆ ಮರದಿಂದ ಸುರಿಯುವ ಅಂಟನ್ನು ಸಣ್ಣ ಸೀಸದಲ್ಲಿ ಸಂಗ್ರಹಿಸಿಕೊಂಡು, ಅದನ್ನೇ ಗೋಂದನ್ನಾಗಿ ಉಪಯೋಗಿಸುತ್ತಿದ್ದೆವು. ಹಾಗೆಯೇ, ನಾವೇ ಮಾಡಿಕೊಳ್ಳುತ್ತಿದ್ದ ಗಾಳಿಪಟಕ್ಕೂ ಇದನ್ನೇ ಬಳಸುತ್ತಿದ್ದೆವು. ಈಗಿನವರಿಗೆ ಇದು ತಿಳಿಯದ ಸಂಗತಿ! ಆದರೆ, ಒಂದು ಸೂರ್ಯೋದಯದ ನಂತರ ತೋಟದಲ್ಲಿದ್ದ ನೀರಿನ ದೋಣಿಗಳೆಲ್ಲ ಮಣ್ಣಿನಲ್ಲಿ ಕಣ್ಮರೆಯಾದವು. ಈ ಜಾಗದಲ್ಲಿ ತೋಟವಿತ್ತು ಎನ್ನುವುದಕ್ಕೆ ಒಂದು ಸಣ್ಣ ಕುರುಹೂ ಈಗ ಉಳಿದಿಲ್ಲ! ತಿಗಳರ ಚಿಕ್ಕನರಸಯ್ಯನವರ ಕುಟುಂಬದವರು ತಮ್ಮ ತೋಟವನ್ನು ಕಳೆದುಕೊಂಡು ಈಗ ಕಾಡುಪಾಲಾಗಿದ್ದಾರೆ. ಹಾಗೆಯೇ, ಆದಿಮೂರ್ತಪ್ಪ ಅವರ ಹೂವಿನ ತೋಟವೂ ಈಗ ಆಧುನಿಕ ಕಾಲಕ್ಕೆ ಅನುಗುಣವಾಗಿ ರೂಪಾಂತರಗೊಂಡಿದೆ. ಆದಿಮೂರ್ತಪ್ಪನವರ ಮರಿಮಕ್ಕಳು ಹೂವಿನ ಗಿಡಗಳನ್ನೆಲ್ಲಾ ಕಿತ್ತು, ಅದರ ಜಾಗದಲ್ಲಿ ಭತ್ತದ ಗದ್ದೆ ಮಾಡಿದ್ದಾರೆ. ಅಗಣಿತ ಸೂರ್ಯೋದಯ ಮತ್ತು ಚಂದ್ರೋದಯಗಳನ್ನು ಕಂಡಿದ್ದ ಅಲ್ಲಿದ್ದ ಕಲ್ಯಾಣಿ ಮಾತ್ರ ಜೀವ ಹಿಡಿದುಕೊಂಡು ಹೇಗೋ ಉಸಿರಾಡುತ್ತಿದೆ. ಈ ಚಿತ್ರಣವು ನಮ್ಮ ನಡುವೆ ನಡೆಯುತ್ತಿರುವ ಹಳತು ಮತ್ತು ಹೊಸತರ ಸಂಘರ್ಷವನ್ನು ಹೇಳುವ ವಾಸ್ತವವೂ ಹೌದು. ಈ ನೆನಪಿನೊಂದಿಗೆ ನಮ್ಮ ಹಿಂದಿನದ್ದೆನ್ನೆಲ್ಲಾ ಯಥಾವತ್ತಾಗಿ ಸ್ವೀಕರಿಸಬೇಕೆಂದು ಹೇಳುವುದು ಬರಹದ ಉದ್ದೇಶವಲ್ಲ. ಆದರೆ, ನಮ್ಮ ಗತದ ಜೀವನ ಹೀಗಿತ್ತು ಎಂದು ತಿಳಿಯುವ ಹಕ್ಕು ಎಲ್ಲರಿಗೂ ಇದೆ. ಈ ಅರಿವು ವರ್ತಮಾನದಲ್ಲಿ ನಮ್ಮನ್ನು ಹೆಚ್ಚು ಉದಾತ್ತತೆಯ ಕಡೆಗೆ ಚಲಿಸಲು ತೋರುದೀಪವಾಗಬಹುದು.

ಹಿಂದೆ ನಮ್ಮ ಸಮಾಜದ ನಡುವೆ ಗಾಂಧಿ ಯುಗದ ಉತ್ಕೃಷ್ಟ ಕೊಡುಗೆಗಳಂತೆ, ತಿಗಳರ ಚಿಕ್ಕನರಸಯ್ಯ ಮತ್ತು ಆದಿಮೂರ್ತಪ್ಪ ಅಂತಹವರು ಇದ್ದರು. ಅವರು ನಮಗಾಗಿ 'ಹೂವಿನ ತೋಟ'ವನ್ನು ಉಡುಗೊರೆಯಾಗಿ ನೀಡಿದ್ದರು ಎಂದರೆ ಈಗಿನವರು ನಂಬಲಾರರು! ದೇವರ ಉಡುಗೊರೆಗಳನ್ನು ಇಂದಿನ ಉಪಭೋಗ ಸಂಸ್ಕೃತಿ ತನ್ನ ಕಾಲಕಸವನ್ನಾಗಿ ಮಾಡಿಕೊಂಡಿದೆ. ಕಾಲದ ತಿರುಗಣೆಯಲ್ಲಿ ಎಲ್ಲವೂ ವ್ಯಾಪಾರವಾಗಿ ಬದಲಾಗಿದೆ.

●